ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೮

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**ಬುಧವಾರ, ದಿನಾಂಕ: ೨೨ನೇ ಜುಲೈ ೨೦೧೫**

---

**ಸಮೂಹ – III**

೧. ಅರಣ್ಯ ಸಚಿವರು
೨. ಕಂದಾಯ ಸಚಿವರು
೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು
೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು
೫. ಸಣ್ಣ ನೀರಾವರಿ ಸಚಿವರು
೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು
೭. ಕಾರ್ಮಿಕ ರಾಜ್ಯ ಸಚಿವರು

---

## ರೈತರ ಜಮೀನಿನಲ್ಲಿ ಬೆಳೆದ ಮರಗಳ ಕಟಾವಿಗೆ ನಿರ್ಭಂಧ ವಿಧಿಸಿರುವ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೨೫೬ (೧೪೩೫) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರೈತರ ಜಮೀನುಗಳಲ್ಲಿ ಬೆಳೆದಂತಹ ಮರಗಳ ಕಟಾವಿಗೆ ಅರಣ್ಯ ಇಲಾಖೆ ನಿರ್ಭಂಧ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದಕ್ಕೆ ಕಾರಣವೇನು ;

(ಆ) ಈ ನಿರ್ಭಂಧವನ್ನು ಸಡಿಲಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ; ಕಟಾವಿಗೆ ಸರ್ಕಾರ ವಿಧಿಸಿರುವ ನಿಯಮಗಳೇನು ; ಇಂತಹ ಕಟಾವು ನಿರ್ಭಂಧ ತೆರವು ಕಾನೂನು ದುರ್ಬಳಕೆಯಾಗುತ್ತಿರುವುದು ನಿಜವೇ ;

(ಇ) ಇದರಲ್ಲಿ ರೈತರ ಪಾತ್ರ ಇರುವುದು ಕಂಡುಬಂದಿದೆಯೇ ; ಇಲ್ಲದಿದ್ದಲ್ಲಿ, ಇಲಾಖೆಯ ಅಧಿಕಾರಿ ಸಿಬ್ಬಂದಿಗಳೇ ಇದರಲ್ಲಿ ಶಾಮೀಲಾಗಿರುವರೆಂಬ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟಪಡಿಸುವುದು ;

(ಈ) ಈ ಕಾನೂನು ನೆರವಿನ ಮೂಲಕ ಅಕ್ರಮ ಮರಗಳ ಕಟಾವು ಸಾಗಾಣಿಕೆಗೆ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗುವುದೇ ; ಕಳೆದ ೨ ವರ್ಷಗಳಿಂದ ಈವರೆಗೆ ಎಷ್ಟು ದೂರು ದಾಖಲಿಸಲಾಗಿವೆ ; ವಶಪಡಿಸಿಕೊಳ್ಳಲಾದ ಮರಗಳ ಪ್ರಮಾಣ ಮತ್ತು ದಂಡ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ಮಲೆನಾಡು ಭಾಗದಲ್ಲಿ ಅಕ್ರಮವಾಗಿ ಮರಗಳನ್ನು ಸಾಗಾಟ ಮಾಡುತ್ತಿರುವ ಬಗ್ಗೆ ಸರ್ಕಾರ ನಿಗಾವಹಿಸಲು ಅನುಸರಿಸಿದ ಕ್ರಮಗಳೇನು ? (ವಿವರ ಒದಗಿಸುವುದು)

## ಕ್ರೀಡಾ ತರಬೇತುದಾರರನ್ನು ಖಾಯಂಗೊಳಿಸುವ ಕುರಿತು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫೭ (೨೦೭೩) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಯುವ ಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕಳೆದ ೧೫ ರಿಂದ ೨೦ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಕ್ರೀಡಾ ತರಬೇತುದಾರರನ್ನು ಖಾಯಂ ಸರ್ಕಾರಿ ನೌಕರರೆಂದು ನೇಮಿಸಿಕೊಳ್ಳಲು ಇರುವ ತೊಂದರೆಗಳೇನು ; ಕನಿಷ್ಠ ಮಾನವೀಯತೆ ಆಧಾರದ ಮೇಲಾದರೂ ನೇಮಿಸಿಕೊಳ್ಳಲು ಸಾಧ್ಯವೇ;

(ಆ) ಕ್ರೀಡಾ ತರಬೇತುದಾರರಿಗೆ ಜೀವನಾಧಾರವಾದ ನೌಕರಿಯ ನಿಶ್ಚಿಂತತೆ ಇಲ್ಲದಿದ್ದರೆ ಅವರ ಮಾನಸಿಕ ಸ್ಥೈರ್ಯ ಕುಂದುವುದಿಲ್ಲವೇ ; ಅಂತಹ ಪರಿಸ್ಥಿತಿಯಲ್ಲಿ ಅವರಿಂದ ಒಳ್ಳೆಯ ಫಲಿತಾಂಶ ನಿರೀಕ್ಷಿಸಬಹುದೆ ;

(ಇ) ಕನಿಷ್ಠ ಪಕ್ಷ ಅವರು ಸೇವೆ ಸಲ್ಲಿಸಿರುವ ಅವಧಿಗೆ ಅನುಗುಣವಾಗಿ ಈಗಿರುವ ಅವರ ಗುತ್ತಿಗೆ ಆಧಾರದ ಸಂಬಳವನ್ನು ಎಷ್ಟು ಕಾಲಾವಧಿಯಲ್ಲಿ ಹೆಚ್ಚಿಸಲಾಗುವುದು ?

## ಕಂದಾಯ ಜಮೀನುಗಳ ಪೋಡಿ ಅರ್ಜಿಗಳ ವಿಳಂಬ

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೨೫೮ (೨೦೪೨) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕಂದಾಯ ಜಮೀನುಗಳ ಪೋಡಿ, ನಕಾಶೆ ಮತ್ತು ನಗರ ಗ್ರಾಮೀಣ ಪ್ರದೇಶಗಳಲ್ಲಿನ ವಾಸ, ವಾಣಿಜ್ಯ, ಕೈಗಾರಿಕೆ ಮತ್ತಿತರೆ ಸೊತ್ತುಗಳ ಸರ್ವೆ, ಅಳತೆ ತರುವಾಯ ಆಕ್ಷೇಪಣೆ, ಪ್ರಕಟಣೆ ಇತ್ಯಾದಿ ಕ್ರಮಗಳಲ್ಲಿ ಭಾರೀ ವಿಳಂಬವಾಗುತ್ತಿರುವುದರಿಂದ ಅರ್ಜಿದಾರರು ತೀವ್ರ ತೊಂದರೆಗೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಮೇಲಿನ ಕಾರ್ಯಗಳಿಗಾಗಿ ಬಾಕಿ ಇರುವ ಅರ್ಜಿಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಯಾವ ಅವಧಿ ಒಳಗೆ ಈ ಅರ್ಜಿಗಳನ್ನು ವಿಲೇ ಮಾಡಲಾಗುವುದು ;

(ಈ) ಮುಂದಿನ ದಿನಗಳಲ್ಲಿ ಇಂತಹ ಅರ್ಜಿಗಳ ಕೋರಿಕೆಗಳು ವಿಳಂಬಗೊಳ್ಳದಂತೆ ತಡೆಯಲು ಸರ್ಕಾರ ಚಿಂತನೆ ನಡೆಸಿ, ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವುದೇ?

## ಬೀದರ್ ಜಿಲ್ಲೆಯಲ್ಲಿ ಕಡತಗಳ ವಿಲೇವಾರಿಯಲ್ಲಿ ವಿಳಂಬ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)–**

೨೫೯ (೧೪೪೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿನ ಎಲ್ಲಾ ತಹಶೀಲ್ದಾರರ ಕಛೇರಿಯ ಸಿಬ್ಬಂದಿಗಳು ಕಡತಗಳ ವಿಲೇವಾರಿ ಮಾಡಲು ಎಷ್ಟು ದಿನ ನಿಗಧಿಪಡಿಸಲಾಗಿದೆ ; ಆದರೆ ಕಡತ ಸಲ್ಲಿಸಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಡತಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೆ ;

(ಇ) ಇಂತಹ ಅಧಿಕಾರಿಗಳು / ಸಿಬ್ಬಂದಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು ;

(ಈ) ೨೦೧೩–೨೦೧೫ನೇ ಸಾಲಿನವರೆಗೆ ಸ್ವೀಕೃತವಾದ ಪೋಡಿಗಳ ಸಂಖ್ಯೆ ಎಷ್ಟು; ಜೊತೆಗೆ ಆ ಪೋಡಿಯ ವಿಲೇವಾರಿ ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಅಂತಹ ತಪ್ಪಿತಸ್ಥ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಕೂಡಲೇ ಯಾವ ಕ್ರಮ ಜರುಗಿಸಲಾಗುವುದು ; ಪೋಡಿಗಳನ್ನು ನೀಡದೆ ತಡೆಹಿಡಿದ ಕಡತಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ಹೊಸ ತಾಲ್ಲೂಕು ರಚನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬೦ (೨೦೩೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಹೊಸ ತಾಲ್ಲೂಕುಗಳನ್ನು ರಚನೆ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆ ; ಅವು ಯಾವುವು ;

(ಆ) ಹೊಸ ತಾಲ್ಲೂಕುಗಳ ರಚನೆಗೆ ಅಗತ್ಯವಿರುವ ಅನುದಾನ ಎಷ್ಟು ; (ವಿವರ ನೀಡುವುದು)

(ಇ) ಹೊಸ ತಾಲ್ಲೂಕುಗಳ ರಚನೆಯ ವಿಳಂಬಕ್ಕೆ ಕಾರಣಗಳೇನು ;

(ಈ) ಈಗಾಗಲೇ ಘೋಷಿಸಿರುವ ಹೊಸ ತಾಲ್ಲೂಕುಗಳನ್ನು ಯಾವಾಗ ಅಸ್ತಿತ್ವಕ್ಕೆ ತರಲಾಗುವುದು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ; ಸರ್ಕಾರದ ನಿಲುವೇನು ?

## ಅರಣ್ಯ ಇಲಾಖೆಯವರು ಬಾಗಲಕೋಟೆ ಜಿಲ್ಲೆಯಲ್ಲಿ ಸಸಿಗಳನ್ನು ನೆಟ್ಟಿರುವ ಕುರಿತು

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು) –**

೨೬೧ (೨೦೮೦) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ ; (ಬಾಗಲಕೋಟೆ ಜಿಲ್ಲೆಯ ಪ್ರತಿ ವಿಧಾನ ಸಭಾ ಕ್ಷೇತ್ರದ ವಿವರ ನೀಡುವುದು)

(ಆ) ಸಸಿಗಳನ್ನು ನೆಡಲು ತಗುಲಿದ ವೆಚ್ಚ ಎಷ್ಟು ;

(ಇ) ನೆಟ್ಟ ಸಸಿಗಳಲ್ಲಿ ಎಷ್ಟು ಜೀವಂತವಾಗಿವೆ ;

(ಈ) ನೆಟ್ಟ ಸಸಿಗಳನ್ನು ಬೆಳಸಲು ಯಾರನ್ನು ಹೊಣೆಗಾರಿಕೆ ಮಾಡಲಾಗಿದೆ ;

(ಉ) ಒಂದು ಗಿಡ ನೆಡಲು ತಗಲುವ ವೆಚ್ಚ ಎಷ್ಟು ?

## ಹೊಸ ತಾಲ್ಲೂಕು ರಚನೆ ಮಾಡುವ ಬಗ್ಗೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬೨ (೨೦೯೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ೪೩ ಹೊಸ ತಾಲ್ಲೂಕುಗಳನ್ನು ರಚಿಸಲು ಸರ್ಕಾರ ಘೋಷಣೆ ಮಾಡಲಾಗಿತ್ತೆ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

(ಆ) ೧೯೮೪, ೧೯೮೬, ೨೦೦೭ರಲ್ಲಿ ಟಿ.ಎಂ. ಹುಂಡೇಕರ್ ಸಮಿತಿ, ಎಂ.ಪಿ.ಪ್ರಕಾಶ್ ಸಮಿತಿ, ಪಿ.ಸಿ. ಗದ್ದಿಗೌಡರ್ ಸಮಿತಿ ವರದಿ ಮೇಲೆ ಹೊಸ ತಾಲ್ಲೂಕು ರಚನೆ ಮಾಡದಿರಲು ಕಾರಣವೇನು ; (ವಿವರ ನೀಡುವುದು)

(ಇ) ಹೊಸ ತಾಲ್ಲೂಕು ರಚನೆ ಮಾಡಲು ಸರ್ಕಾರ ಹಣ ಬಿಡುಗಡೆ ಮಾಡದಿರಲು ಕಾರಣವೇನು ?

## ಜಲಸಂಪನ್ಮೂಲ ಇಲಾಖೆಯಿಂದ ಬಿಡುಗಡೆಯಾಗುತ್ತಿರುವ ಅನುದಾನ ಕುರಿತು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬೩ (೧೪೩೭) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಮನಗರ ಜಿಲ್ಲೆಗೆ ಕಳೆದ ೩ ವರ್ಷಗಳಲ್ಲಿ ಜಲಸಂಪನ್ಮೂಲ ಇಲಾಖೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು; ಖರ್ಚು ಮಾಡಲಾದ ಮೊತ್ತವೆಷ್ಟು ; ಖರ್ಚಾಗದೆ ಉಳಿದ ಮೊತ್ತವೆಷ್ಟು ; (ವರ್ಷವಾರು, ಲೆಕ್ಕಶೀರ್ಷಿಕೆವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಅನುದಾನದಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ ; (ಲೆಕ್ಕಶೀರ್ಷಿಕೆವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಈ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆಯೇ ; ಟೆಂಡರ್ ಪ್ರಕ್ರಿಯೆ ನಡೆಸುವಾಗ ಅನುಸರಿಸಲಾಗಿರುವ ಮಾನದಂಡಗಳೇನು ; (ವಿವರ ನೀಡುವುದು)

(ಈ) ಈ ಕಾಮಗಾರಿಗಳನ್ನು ಯಾವ ಸಂಸ್ಥೆ/ಗುತ್ತಿಗೆದಾರರಿಗೆ ನೀಡಲಾಗಿದೆ ; (ಸಂಸ್ಥೆ/ಗುತ್ತಿಗೆದಾರರ ಹೆಸರು, ವಿಳಾಸ ಸಹಿತ ಕಾಮಗಾರಿಗಳ ಪ್ರತ್ಯೇಕವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಈ ಯೋಜನೆಗಳಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಿಗೆ ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ ; ಹಾಗಿದ್ದಲ್ಲಿ, ಎಷ್ಟು ಕಾಲಮಿತಿ ನೀಡಲಾಗಿದೆ ? (ಸಂಪೂರ್ಣ ವಿವರ ನೀಡುವುದು)

**ವರಾಹಿ ನೀರಾವರಿ ಯೋಜನೆಯ ಎಡದಂಡೆ ಕಾಲುವೆಯ**

**೨೩ನೇ ಕಿ.ಮೀ. ಮುಖ್ಯ ಕಾಲುವೆ ಕಾಮಗಾರಿಯಲ್ಲಾದ ಕಳಪೆ ಕುರಿತು**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬೪ (೨೦೬೭) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವರಾಹಿ ನೀರಾವರಿ ಯೋಜನೆಯ ಎಡದಂಡೆ ೨೩ನೇ (ಇಪ್ಪತ್ತೂರನೇ) ಕಿ.ಮೀ.ನ ಮುಖ್ಯ ಕಾಲುವೆಯ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು; ಈ ಕಾಮಗಾರಿಯ ಮೇಲ್ವಿಚಾರಣೆ ನಡೆಸುತ್ತಿರುವ ಇಲಾಖೆಯ ವಿವಿಧ ದರ್ಜೆಯ ಅಭಿಯಂತರರು ಯಾರು ;

(ಆ) ಸದರಿ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರು ಈ ಯೋಜನೆಯ ಇತರೆ ಯಾವ ಯಾವ ಕಡೆಗಳಲ್ಲಿ ಕಾಲುವೆ, ಉಪಕಾಲುವೆ ಮತ್ತು ವಿತರಣಾ ನಾಲೆಯ ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ ; ನಿರ್ವಹಿಸುತ್ತಿದ್ದಾರೆ ; ನಿರ್ವಹಿಸಬೇಕಾಗಿದೆ ; (ಕಾಮಗಾರಿಯ ಪ್ರಾರಂಭ ಹಾಗೂ ಮುಕ್ತಾಯ ಅವಧಿ ಹಾಗೂ ಕಾಮಗಾರಿಗಳಿಗೆ ಪಾವತಿಸಿದ ಹಾಗೂ ಪಾವತಿಸಲು ಬಾಕಿ ಇರುವ ಮೊತ್ತದೊಂದಿಗೆ ವಿವರ ನೀಡುವುದು)

(ಇ) ಸದರಿ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಹಾಗೂ ಕಾಮಗಾರಿ ಮೇಲ್ವಿಚಾರಣೆ ನಡೆಸುತ್ತಿರುವ ಸಹಾಯಕ ಅಭಿಯಂತರರ ಮೇಲೆ ಕಳಪೆ ಕಾಮಗಾರಿ ಹಿನ್ನೆಲೆಯಲ್ಲಿ ಹಾಲಾಡಿ ಗ್ರಾಮ ಪಂಚಾಯತ್‌ನಲ್ಲಿ ದೂರು ಮತ್ತು ಕುಂದಾಪುರ ತಾಲ್ಲೂಕು ಪಂಚಾಯತ್ ಸಮಿತಿಯ ಸಭೆಯಲ್ಲಿ ನಿರ್ಣಯಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸಹಾಯಕ ಅಭಿಯಂತರರ ಕುಮ್ಮಕ್ಕಿನಿಂದ ಈ ಗುತ್ತಿಗೆದಾರ ಕುಂದಾಪುರ ತಾಲ್ಲೂಕು ಪಂಚಾಯತ್ ಸಮಿತಿ ಸದಸ್ಯರ ಮೇಲೆ ಹಲ್ಲೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಮೇಲಿನ ಗುತ್ತಿಗೆದಾರ ವರಾಹಿ ನೀರಾವರಿ ಯೋಜನೆಯಲ್ಲಿ ನಿರ್ವಹಿಸಿದ ಎಲ್ಲಾ ಕಾಮಗಾರಿಗಳನ್ನು ತನಿಖೆಗೆ ಒಳಪಡಿಸಲಾಗುವುದೇ ; ಮತ್ತು ಪರಿಶೀಲಿಸಿ, ಎಡದಂಡೆ ಕಾಲುವೆಯ ೨೩ನೇ ಕಿ.ಮೀ. ಮುಖ್ಯ ಕಾಲುವೆಯ ಕಾಮಗಾರಿಯ ಮೇಲ್ವಿಚಾರಣೆ ನಡೆಸುತ್ತಿರುವ ಸಹಾಯಕ ಅಭಿಯಂತರರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದೇ ?

## ಚಾರ್ಮಾಡಿ ಘಾಟ್ ರಸ್ತೆ

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬೫ (೧೪೪೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ವ್ಯಾಪ್ತಿಯ ಚಾರ್ಮಾಡಿ ಘಾಟ್ ಪಶ್ಚಿಮಘಟ್ಟ ಶ್ರೇಣಿಯಲ್ಲಿ ಬರುವ ಬಿದಿರುಹಳ್ಳಿ ಗ್ರಾಮದ ಜನರು ಅತಿವೃಷ್ಟಿ ಮತ್ತು ಕಾಡು ಪ್ರಾಣಿಗಳ ಹಾವಳಿಯಿಂದ ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಗ್ರಾಮದ ರೈತರು ತಮ್ಮ ಜಮೀನಿನಲ್ಲಿ ಬೆಳೆಯನ್ನು ಬೆಳೆಯಲಾರದೆ ನಿತ್ಯ ನರಕಯಾತನೆ ಅನುಭವಿಸುವುದರ ಜೊತೆಗೆ, ಸ್ಥಳಾಂತರಕ್ಕೆ ಹಲವು ದಶಕಗಳಿಂದ ಮನವಿ ಮಾಡಿದ್ದು ಸ್ಥಳಾಂತರಕ್ಕೆ ಯೋಜನೆ ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

## ನಿರುದ್ಯೋಗಿ ಪದವೀಧರರಿಗೆ ಉದ್ಯೋಗಾವಕಾಶವನ್ನು ಒದಗಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೨೬೬ (೨೦೩೪) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಎಷ್ಟು ಉದ್ಯೋಗ ವಿನಿಮಯ ಕಛೇರಿಗಳು ಇರುತ್ತವೆ ;

(ಆ) ಯಾವ ಯಾವ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಎಷ್ಟೆಷ್ಟು ನಿರುದ್ಯೋಗಿ ಪದವೀಧರರು ಹೆಸರು ನೋಂದಾಯಿಸಿದ್ದಾರೆ ;

(ಇ) ರಾಜ್ಯದಲ್ಲಿ ನಿರುದ್ಯೋಗ ಪದವೀಧರರ ಸಂಖ್ಯೆ ಹೆಚ್ಚಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಎಷ್ಟು ಜನ ನಿರುದ್ಯೋಗಿ ಪದವೀಧರರು ಇರುವರು ಎಂಬ ಮಾಹಿತಿ ಸರ್ಕಾರದಲ್ಲಿ ಇರುವುದೇ ;

(ಉ) ಮಾಹಿತಿ ಇಲ್ಲದೆ ಇದ್ದಲ್ಲಿ, ಅದನ್ನು ಯಾವುದಾದರೊಂದು ಏಜೆನ್ಸಿ ಮೂಲಕ ಪಡೆಯಲಾಗುವುದೇ ;

(ಊ) ನಿರುದ್ಯೋಗ ಪದವೀಧರರಿಗೆ ಉದ್ಯೋಗಾವಕಾಶ ಒದಗಿಸಿ ಕೊಡಲು ಸರ್ಕಾರವು ಯಾವ ಕ್ರಮ ಕೈಗೊಳ್ಳಲಿದೆ ; ಇದ್ದಲ್ಲಿ, ಯಾವ ಹಂತದಲ್ಲಿದೆ ;

(ಋ) ನಿರುದ್ಯೋಗಿ ಪದವೀಧರರಿದ್ದರೆ ಉದ್ಯೋಗ ಸಿಗುವವರೆಗೆ ಸ್ಟೈಫಂಡ್ ಕೊಡಲು ಕ್ರಮ ಕೈಗೊಳ್ಳಲಾಗುವುದೇ ; ಅಥವಾ ಅವರಿಗೆ ಸರ್ಕಾರಿ ಖಾಲಿ ಇರುವ ಅರೆಕಾಲಿಕ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡಲಾಗುವುದೇ ?

## ಕೆನರಾ ವೃತ್ತದ ಅರಣ್ಯ ಅಭಿವೃದ್ಧಿ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)** –

೨೬೭ (೧೪೩೩) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೆನರಾ ಅರಣ್ಯ ವೃತ್ತದಲ್ಲಿ ೧೯೮೫ ರಿಂದ ೨೦೧೫ ರವರೆಗೆ ನೆಟ್ಟ ನೆಡುತೋಪು ವಿಸ್ತೀರ್ಣ ಹಾಗೂ ಗಿಡಗಳ ಸಂಖ್ಯೆ ಎಷ್ಟು ; ಯಾವ ಯಾವ ಜಾತಿ ಗಿಡಗಳು ನೆಡಲಾಗಿದೆ ; ಕಾಮಗಾರಿಗೆ ಖರ್ಚಾದ ಹಣವೆಷ್ಟು ; (ವಲಯವಾರು, ವರ್ಷವಾರು, ಕಾಮಗಾರಿವಾರು ವಿವರ ನೀಡುವುದು)

(ಆ) ಈ ಮೇಲಿನ ಕಾಮಗಾರಿಗೆ ಇಲ್ಲಿಯವರೆಗೆ ಖರೀದಿಸಿದ ರಸಗೊಬ್ಬರದ ಪ್ರಮಾಣ ಎಷ್ಟು ; (ವಿವರ ನೀಡುವುದು)

(ಇ) ೧೯೮೫ ರಿಂದ ೨೦೧೫ ರವರೆಗೆ ಈ ನೆಡುತೋಪಿನ ಮರ ಮುಟ್ಟುಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ; (ವಿವರ ನೀಡುವುದು)

(ಈ) ೧೯೮೫ ರಿಂದ ೨೦೧೫ ರವರೆಗೆ ಕೆನರಾ ವೃತ್ತ ವ್ಯಾಪ್ತಿಯಲ್ಲಿ ತೆಗೆದ ಇಂಗು ಗುಂಡಿ, ಸಿ.ಪಿ.ಟಿ. (ಅಗಳ), ಕೆರೆಗಳು ಎಷ್ಟು ; ಮತ್ತು ಇದಕ್ಕೆ ಖರ್ಚಾದ ಹಣವೆಷ್ಟು ; (ವಲಯವಾರು, ವರ್ಷವಾರು ಮಾಹಿತಿ ನೀಡುವುದು)

(ಉ) ೧೯೮೫ ರಿಂದ ೨೦೧೫ ರವರೆಗೆ ಬೆಂಕಿ ನಂದಿಸಲು ಖರ್ಚಾದ ಹಣವೆಷ್ಟು ; (ವಲಯವಾರು, ವರ್ಷವಾರು ಮಾಹಿತಿ ನೀಡುವುದು)

(ಊ) ಕೆನರಾ ವೃತ್ತದಲ್ಲಿ ಕೈಗೊಂಡ ಮಾದರಿ ಯೋಜನೆಯಾದ ಗ್ರೀನ್ ಇಂಡಿಯಾ ಮಿಷನ್ ಯೋಜನೆಯ ಕಾಮಗಾರಿಯ ಅಂದಾಜು ವೆಚ್ಚ ಎಷ್ಟು ; ಕ್ರಿಯಾ ವರದಿಯಲ್ಲಿನ ಅಂಶಗಳೇನು ; (ವಿವರ ನೀಡುವುದು) ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿದೆ ; ಸದರಿ ಕಾಮಗಾರಿ ಉಸ್ತುವಾರಿ ಮತ್ತು ನಿರ್ವಹಣೆಯನ್ನು ಯಾರಿಗೆ ವಹಿಸಲಾಗಿದೆ ; (ವಿವರ ನೀಡುವುದು) ಈ ಕಾಮಗಾರಿ ಅನುಷ್ಠಾನವಾದ ನಂತರ ಕೇಂದ್ರ ಸರ್ಕಾರಕ್ಕೆ ಅನುಷ್ಠಾನದ ವರದಿಯನ್ನು ಸಲ್ಲಿಸಲಾಗಿದೆಯೇ ; ಸಲ್ಲಿಸಲಾಗಿದ್ದಲ್ಲಿ, ವರದಿಯ ಪ್ರತಿ ಹಾಗೂ ಆಡಿಟ್ ಪ್ರತಿ ನೀಡುವುದು ?

## ಸರ್ಕಾರಿ ಐ.ಟಿ.ಐ. ಸಂಸ್ಥೆಗಳ ಕುರಿತು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೨೬೮ (೨೦೮೪) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ೨೦೧೨--೧೩ನೇ ಸಾಲಿನವರೆವಿಗೆ ಪ್ರಾರಂಭಿಸಿರುವ ಸರ್ಕಾರಿ ಐ.ಟಿ.ಐ.ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಐ.ಟಿ.ಐ. ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ, ಬೋಧಕೇತರ, ತರಬೇತುದಾರರು ಹಾಗೂ ಇತರೆ ಹುದ್ದೆಗಳ ಸಂಖ್ಯೆ ಎಷ್ಟು ; (ವರ್ಗವಾರು ಮಾಹಿತಿ ನೀಡುವುದು)

(ಇ) ಸದರಿ ಹುದ್ದೆಗಳು ಎಂದಿನಿಂದ ಖಾಲಿ ಇವೆ ; ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು ;

(ಈ) ಕಳೆದ ೨ ವರ್ಷಗಳಲ್ಲಿ ಹೊಸದಾಗಿ ಪ್ರಾರಂಭಿಸಿದ ಸರ್ಕಾರಿ ಐ.ಟಿ.ಐ.ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಉ) ಪ್ರತಿ ತರಬೇತಿ ಸಂಸ್ಥೆಗಳಲ್ಲಿ ಎಷ್ಟು ಯುನಿಟ್‌ಗಳನ್ನು ಪ್ರಾರಂಭಿಸಲಾಗಿದೆ; ಸದರಿ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ವರ್ಗವಾರು ಪೂರ್ಣ ವಿವರ ನೀಡುವುದು)

(ಊ) ಐ.ಟಿ.ಐ. ಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಬೋಧಕ, ಬೋಧಕೇತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು ? (ವರ್ಗವಾರು ವಿವರ ನೀಡುವುದು)

## ಮೀನು ಸಾಕಾಣಿಕೆ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೨೬೯ (೨೦೭೫) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೇಜ್ ಕಲ್ಚರ್ ಮಾದರಿಯಲ್ಲಿ ಎಲ್ಲೆಲ್ಲಿ ಮತ್ತು ಯಾವ ಪ್ರಮಾಣದಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ ;

(ಆ) ಈ ಮೀನುಗಳಿಗೆ ಯಾವ ಮಾದರಿಯಲ್ಲಿ ಎಷ್ಟು ದಿನಗಳಿಗೊಮ್ಮೆ ಆಹಾರ ಒದಗಿಸಬೇಕು ;

(ಇ) ಪ್ರಸ್ತುತ ಸಾಕಾಣಿಕೆಯಾಗುತ್ತಿರುವ ಈ ಮೀನುಗಳಿಗೆ ಆಹಾರದ ದಾಸ್ತಾನು ಇಲ್ಲದಿರುವುದು ನಿಜವೇ ;

(ಈ) ಇದಕ್ಕೆ ಕಾರಣವೇನು ; ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ಪರಿಹರಿಸಲಾಗುವುದು ;

(ಉ) ಇದಕ್ಕೆ ಬೇಕಾಗುವ ಕಾಲಾವಧಿ ಎಷ್ಟು ?

## ಕರಾವಳಿ ಕರ್ನಾಟಕದ ಜಿಲ್ಲೆಗಳಲ್ಲಿ ಹರಿಯುವ ನದಿಗಳಿಗೆ ಕಿಂಡಿ ಅಣೆಕಟ್ಟುಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು)** –

೨೭೦ (೨೦೪೪) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರಾವಳಿ ಕರ್ನಾಟಕ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹರಿಯುವ ನದಿಗಳಿಗೆ ನಿರ್ಮಿಸಲಾದ ಕಿಂಡಿ ಅಣೆಕಟ್ಟುಗಳ ಸಂಖ್ಯೆ ಎಷ್ಟು; ಎಷ್ಟು ಕಿಂಡಿ ಅಣೆಕಟ್ಟುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ ;

(ಆ) ಕಿಂಡಿ ಅಣೆಕಟ್ಟುಗಳ ಮುಖಾಂತರ ಯಾವ ಯಾವ ಪ್ರದೇಶಗಳ ಕೃಷಿಗೆ ನೀರಿನ ಸೌಲಭ್ಯ ಒದಗಿಸಲಾಗಿದೆ ;

(ಇ) ಪಶ್ಚಿಮ ವಾಹಿನಿಯಾಗಿ ಹರಿಯುವ ನದಿಗಳಿಗೆ ಕಿಂಡಿ ಅಣೆಕಟ್ಟುಗಳನ್ನು ರಚಿಸುವ ಮೂಲಕ ನೀರಿನ ಮಟ್ಟವನ್ನು ಮೇಲಕ್ಕೆ ಏರಿಸಲು ಇಲಾಖೆಯ ಮುಂದೆ ಯೋಜನೆಗಳು ಇದೆಯೇ ; ಈ ಯೋಜನೆಗೆ ಇಲಾಖೆ ಎಷ್ಟು ಹಣ ಮೀಸಲು ಇಟ್ಟಿದೆ ; ಯಾವ ಯೋಜನೆಯ ಮುಖಾಂತರ ನಿರ್ವಹಿಸಲಾಗುವುದು ? (ವಿವರ ನೀಡುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ7, ಕಾ.ಸೂ. 339, ಪ್ರತಿಗಳು 1500